# ಯುರೋಪ್‌ನ ಚಳಿಗಾಲ

ಎಲ್ಲೆಡೆಯೂ ತುಂಬಿರುವ ಹಸಿರು ಹಾಗೂ ತಂಪಾದ ಹವಾಮಾನದ ಕಾರಣದಿಂದಾಗಿ ಮೊದಲ ಮಳೆಯ ನಂತರ ಹರಡಿರುವ ನಿಸರ್ಗದ ಸೌಂದರ್ಯದ ಅನುಭವವು ಅದ್ಭುತವಾಗಿರುತ್ತದೆ. ಭೂದೃಶ್ಯಾವಳಿಯು ಅತ್ಯಂತ ಸುಂದರವಾಗಿರುತ್ತದೆ. ಮಳೆಯಿಂದ ತೇವಾಂಶಭರಿತವಾದ ಭೂಮಿಯ ಪರಿಮಳವು ನಮ್ಮ ನಾಸಿಕವನ್ನು ತುಂಬಿಕೊಳ್ಳುತ್ತದೆ. ನನಗೆ ಈ ದೃಶ್ಯವನ್ನು ಎಂದೆಂದೂ ಹೊಂದುವಂತಿದ್ದರೆ ಎಂದೆನಿಸುತ್ತದೆ! ಆದರೆ ಮೊದಲ ಮಳೆಯ ಆ ಖುಷಿಯು ಎಂದಿದಿಗೂ ಇರುವುದಿಲ್ಲ. ನನಗೆ ಮೊದಲ ಮಳೆಯ ಕುರಿತು ಹಾಗನ್ನಿಸಿದಲ್ಲಿ, ಯುರೋಪಿಯನ್ನರಿಗೂ ಚಳಿಗಾಲದ ಮೊದಲ ದಿನ ಹಿಮಪಾತದ ಸಮಯದಲ್ಲಿಯೂ ಹೀಗೆ ಅನಿಸಿಕೆಯಾಗುತ್ತದೆಯೇ?

ನಾನು ಸ್ಟಡಿ ಟೂರ್‌ಗಾಗಿ ಜರ್ಮನಿಯಲ್ಲಿದ್ದೆ. ನಾವು ಅಲ್ಲಿ ಮ್ಯಾನ್‌ಹೇಮ್, ಹೈಡ್‌ಬರ್ಗ್ ಇತ್ಯಾದಿ ಸ್ಥಳಗಳನ್ನು ಭೇಟಿ ಮಾಡುವವರಿದ್ದೆವು. ನಾವು ಬೆಳಿಗ್ಗೆ ಬೇಗನೇ ಎದ್ದೆವು. ಆಶ್ಚರ್ಯವೆಂದರೆ ಇಡೀ ಪಟ್ಟಣವೂ ಸಂಪೂರ್ಣ ಹಿಮದಲ್ಲಿಯೇ ಆವರಿಸಿತ್ತು. ನಾವು ಮೊದಲು ಕಾಶ್ಮೀರ್, ಮನಾಲಿ, ಕ್ಯಾಲಿಫೋರ್ನಿಯಾಗಳಲ್ಲಿ ಹಿಮದ ಆಟಗಳನ್ನು ಆನಂದಿಸಿದ್ದೆವು, ಆದರೆ ಹಿಂದೆಂದೂ ಹೀಗೆ ಇಡೀ ಪಟ್ಟಣದ ಮನೆಗಳೆಲ್ಲ ಹಿಮದಿಂದ ತುಂಬಿರುವ ನೋಟವನ್ನು ನೋಡಿರಲಿಲ್ಲ. ಇಲ್ಲಿ ಮನೆ, ಮೈದಾನ, ಮರಗಳೆನ್ನದೇ ಎಲ್ಲವೂ ಹಿಮದಿಂದ ಆವೃತವಾಗಿದ್ದವು. ಕೇವಲ ನಮ್ಮ ಕಾಲುಹಾದಿ ಮಾತ್ರವೇ ಇದಕ್ಕೆ ಅಪವಾದವೆನ್ನುವಂತಿತ್ತು. ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಂಡಿದ್ದರಿಂದ ನಡುಗುವಿಕೆ ಇಲ್ಲದೇ ಇದ್ದರೂ ಸ್ವಲ್ಪ ಚಳಿಯು ಹಿತವಾದ ಅನುಭವವಾಗಿತ್ತು. ರವಿವಾರ ಮತ್ತು ಅತ್ಯಧಿಕ ಹಿಮಪಾತವಾಗಿದ್ದರಿಂದಾಗಿ ಬೀದಿಗಳಲ್ಲಿ ಹಿಮ ಬಿಟ್ಟರೆ ಏನೂ ಇರಲಿಲ್ಲ. ಆ ನಗರದ ಪ್ರವಾಸ ಸ್ಮರಣೀಯವಾಗಿತ್ತು. ನಮ್ಮ ಪ್ರವಾಸದ ಅಂತ್ಯದಲ್ಲಿ ನಮ್ಮ ಪ್ರವಾಸ ಮಾರ್ಗದರ್ಶಿ ನಮ್ಮ ಮನಸ್ಸು ಅರಿತವರಂತೆ ಕಾಫಿ ತೆಗೆದುಕೊಳ್ಳುವಿರಾ ಎಂದು ಕೇಳಿದರು. ನಾವು ಒಂದು ಕ್ಷಣವೂ ಯೋಚಿಸದೇ ತಲೆಯಲ್ಲಾಡಿಸಿದೆವು.  ಆದರೆ ಕಾಫಿಯ ಬದಲಾಗಿ ರುಚಿಕರ ಚಾಕೋಲೇಟ್ ಅನ್ನು ಸವಿದೆವು. ಮೊದಲು ಒಪ್ಪದೇ ಇದ್ದರೂ ನಮ್ಮ ಸ್ನೋ ವಾಕ್ ನಂತರ ಸ್ವಲ್ಪ ನಡುಗುವಿಕೆಯು ಇದ್ದಿದ್ದರಿಂದ ಬಿಸಿ ಚಾಕೋಲೇಟ್ ಪೇಯವು ನಿಜಕ್ಕೂ ಆಹ್ಲಾದಕರವೆನಿಸಿತು. ಇನ್ನೊಂದು ಸ್ಮರಣೀಯ ನೋಟವೆಂದರೆ ಉಜ್ವಲವಾದ ಹಿಮಕವಚದ ನೋಟ,  ನಮ್ಮ ವಿಮಾನವು ಡಿಸೆಂಬರ್‌ನಲ್ಲಿ ಫ್ರಾಂಕ್‌ಫರ್ಟ್‌ನಲ್ಲಿ ಇಳಿಯುತ್ತಿದ್ದಾಗ, ಅದು ಅದ್ಭುತವೆನಿಸುತ್ತಿತ್ತು!. ಇಡೀ ನಗರವನ್ನು ಹಿಮವು ಆವರಿಸಿದೆಯೋ ಎನ್ನುವಂತೆ ತೋರುತ್ತಿತ್ತು. ಅದು ಬೆಳಗಿನ ಅವಧಿಯಾಗಿತ್ತು ಮತ್ತು ಹೆಚ್ಚಿನ ಚಟುವಟಿಕೆ ಕಾಣುತ್ತಿರಲಿಲ್ಲ. ಇಡೀ ನಗರವೂ ಹಿಮದ ಅಡಿಯಲ್ಲಿ ವಿಶ್ರಾಂತಿ ಪಡೆಯುತ್ತಿದೆಯೇನೋ ಎಂದು ತೋರುತ್ತಿತ್ತು.

ಯುರೋಪಿಯನ್ ನಗರಗಳು ನನಗೆ ದಂತಕಥೆಗಳ ರಾಜಧಾನಿಗಳಂತೆಯೇ ಕಂಡುಬರುತ್ತವೆ. ಸುಂದರ ಮನೆಗಳು, ಚಿಕ್ಕ ರಸ್ತೆಗಳು, ಸರೋವರಗಳು, ಚಿಕ್ಕ ಸೇತುವೆಗಳು ಮತ್ತು ಇನ್ನೂ ಏನೇನೋ. ಹಿಮದ ನಡುವೆ ಪ್ರವಾಸವು ಇದೇ ದಂತಕಥೆಯ ಅಧ್ಯಾಯ ಎಂದೆನಿಸುತ್ತದೆ. ಹಿತವಾದ ವಾತಾವರಣ, ಹಗುರ ಹಿಮ, ಮಿಂಚುವ ಹಿಮಾವೃತ ನಗರಗಳು ಇವೆಲ್ಲವನ್ನೂ ಶಬ್ದದಲ್ಲಿ ವಿವರಿಸಲು ಸಾಧ್ಯವೇ ಇಲ್ಲ... ನಮ್ಮ ಭಾರತೀಯರಿಗೆ ಈ ಹಿಮಾವೃತ ನಗರಗಳನ್ನು ನೋಡುವ ಅವಕಾಶವಿಲ್ಲ. ಆದರೆ ನನಗನ್ನಿಸುತ್ತದೆ ಈ ಅನುಭವವನ್ನು ಪ್ರತಿಯೊಬ್ಬರೂ ಜೀವನದಲ್ಲಿ ಒಮ್ಮೆಯಾದರೂ ಅನುಭವಿಸಬೇಕು. ಚಳಿಗಾಲದಲ್ಲಿ ಯುರೋಪ್‌ನ ಪ್ರವಾಸ ಮಾಡುವುದು ಈ ನೈಸರ್ಗಿಕ ಸೌಂದರ್ಯದ ಜೀವಮಾನದ ಅನುಭವ ಹಾಗೂ ಆನಂದವನ್ನು ಒದಗಿಸುತ್ತದೆ.

ಚಳಿಗಾಲ ಮತ್ತು ಬೇಸಿಗೆ ಎರಡೂ ಇಲ್ಲಿ ಬೇರೆ ಬೇರೆ ಜೀವನಶೈಲಿಗಳನ್ನು ತೋರಿಸುತ್ತವೆ. ನಾವು ಉಷ್ಣವಲಯದ ವಾತಾವರಣವನ್ನು ಹೊಂದಿರುವುದರಿಂದ ಇವೆರಡೂ ಕಾಲಗಳು ದೊಡ್ಡ ಪರಿವರ್ತನೆಗಳನ್ನು ತರುತ್ತವೆ ಎನ್ನುವುದು ನಮಗೆ ತಿಳಿಯುವುದಿಲ್ಲ. ಸ್ಥಳೀಯ ಜನರು ಕಾಲಕ್ಕೆ ತಕ್ಕಂತೆ ತಮ್ಮನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಅವರು ದಿನಸಿ ಹಾಗೂ ಬೇರೆ ಅಗತ್ಯಗಳನ್ನು ಮನೆಗಳಲ್ಲಿ ತುಂಬಿಕೊಳ್ಳುತ್ತಾರೆ, ಇದರಿಂದ ಅವರು ಮನೆಯಿಂದ ಹೊರಹೋಗಬೇಕಾಗಿರುವುದಿಲ್ಲ. ಆದರೆ ಮನೆಗಳ ಸುತ್ತಲಿನ ಹಿಮವನ್ನು ಖಾಲಿ ಮಾಡುವುದೇ ದೊಡ್ಡ ಕೆಲಸವಾಗಿರುತ್ತದೆ. ವಾರ್ಡ್‌ರೋಬ್‌ಗಳಲ್ಲಿ ಚಳಿಗಾಲದ ಬಟ್ಟೆಗಳ ರಾಶಿಯೇ ಇರುತ್ತದೆ. ಪ್ರತಿ ಆರು ತಿಂಗಳಿಗೆ ಒಮ್ಮೆ ವಾರ್ಡ್‌ರೋಬ್ ಅನ್ನು ಬೇರೆ ಬೇರೆ ಬಟ್ಟೆಗಳಿಂದ ತುಂಬುವುದು ಅತ್ಯಗತ್ಯವಾಗಿರುತ್ತದೆ. ಸ್ಕಿಯಿಂಗ್ ಹೊರತುಪಡಿಸಿ ಬೇರೆ ಯಾವುದೇ ಆಟಗಳನ್ನು ಹಿಮ ಬೀಳುವ ಅವಧಿಗಳಲ್ಲಿ ಆಡಲು ಸಾಧ್ಯವಾಗುವುದಿಲ್ಲ. ಹಾಗಾಗಿ ಸ್ಕೀಯಿಂಗ್ ಮಾತ್ರವೇ ಆಡುತ್ತಾರೆ. ಅಷ್ಟೇ ಅಲ್ಲ ಪ್ರವಾಸದ ರೀತಿಯೂ ಕೂಡ ಬದಲಾಗುತ್ತದೆ. ಅತ್ಯಧಿಕ ಹಿಮಪಾತವೆಂದರೆ ಶಾಲೆಯ ಮಕ್ಕಳಿಗೆ ರಜಾದಿನಗಳೆಂದೇ ಅರ್ಥ. ನಾವು ನಮ್ಮ ಊಟ ಹಾಗೂ ಆಹಾರದ ವಿಧವನ್ನು ಕಾಲಕ್ಕೆ ತಕ್ಕಂತೆ ಬದಲಾಯಿಸುವಂತೆಯೇ ಚಳಿಗಾಲದಲ್ಲಿ ಇಲ್ಲಿಯೂ ಆಹಾರ ಸೇವನೆಯ ರೀತಿ ಬದಲಾಗುತ್ತದೆ. ನಾನು ಯುರೋಪಿಯನ್ ಅಡುಗೆ ಮನೆಗಳನ್ನು ಅಧ್ಯಯನ ಮಾಡದೇ ಇದ್ದರೂ ಕೂಡ ಅಲ್ಲಿ ಬದಲಾವಣೆಗಳಿರುತ್ತವೆ ಎನ್ನುವುದನ್ನು ತಿಳಿದಿದ್ದೇನೆ. ಹಾಗಾಗಿ ಇಲ್ಲಿ ಕಾಲ ಬದಲಾದಂತೆ ಜೀವನಶೈಲಿಯು ದೊಡ್ಡ ಮಟ್ಟದಲ್ಲಿಯೇ ಬದಲಾಗುತ್ತದೆ.

ಯುರೋಪ್ ಬೇಸಿಗೆಯಲ್ಲಿ ಭೇಟಿ ಮಾಡಬೇಕಿರುವ ಸ್ಥಳವಾಗಿರುವಂತೆಯೇ, ನಾವು ಇಲ್ಲಿನ ಸುಂದರತೆಯನ್ನು ಚಳಿಗಾಲದಲ್ಲಿಯೂ ವೀಕ್ಷಿಸಬೇಕು. ನಾವು ಯುರೋಪ್ ಅನ್ನು ನವೆಂಬರ್ ಮತ್ತು ಡಿಸೆಂಬರ್ ವೇಳೆಯಲ್ಲಿ ಭೇಟಿ ಮಾಡಿದಲ್ಲಿ ಎಲ್ಲ ವಿಭಿನ್ನತೆಯೂ ಈ ಬದಲಾವಣೆಗೆ ಸೇರಿಕೊಳ್ಳುತ್ತದೆ, ಏಕೆಂದರೆ ಈ ಸಮಯದಲ್ಲಿ ಅಲ್ಲಿನ ಜನ ಕ್ರಿಸ್ಮಸ್‌ಗೆ ತಯಾರಿಯನ್ನು ಆರಂಭಿಸುತ್ತಾರೆ. ಕ್ರಿಸ್ಮಸ್ ತಯಾರಿಯಿಂದಾಗಿ ಅಲ್ಲಿನ ವಾತಾವರಣದಲ್ಲಿ ಹೊಸ ಸಂಭ್ರಮ ತುಂಬಿರುತ್ತದೆ. ಮನೆಗಳು, ಮಾಲ್‌ಗಳು, ರಸ್ತೆಗಳು, ಚಿಕ್ಕ ಅಂಗಡಿಗಳು ಎಲ್ಲವೂ ಕ್ರಿಸ್ಮಸ್ ಅನ್ನು ಸ್ವಾಗತಿಸುವುದಕ್ಕೆ ಸಿದ್ಧವಾಗಿರುತ್ತವೆ. ಲಂಡನ್ ನಗರವಂತೂ ಕ್ರಿಸ್ಮಸ್ ಸಮಯದಲ್ಲಿ ಸಂಭ್ರಮದ ಗೂಡಿನಂತೆ ಕಂಗೊಳಿಸುತ್ತದೆ. ಇಡೀ ನಗರವೂ ಸುಂದರ ಅಲಂಕಾರಗಳನ್ನು ಹಾಗೂ ಲೈಟಿಂಗ್ ಅನ್ನು ಹೊಂದಿರುತ್ತದೆ. ಸುಂದರ ಸಾಲಂಕೃತ ಕ್ರಿಸ್ಮಸ್ ಮರಗಳನ್ನು ನೋಡುವುದು, ಮುಖ್ಯರಸ್ತೆಗಳಲ್ಲಿ ಮಿನಗುವ ದೀಪಗಳು, ತಡರಾತ್ರಿಯ ಶಾಪಿಂಗ್ ಮತ್ತು ಪ್ರವಾಸಿಯಾಗಿ ಈ ಆನಂದದ ಅನುಭೂತಿಯನ್ನು ಹೊಂದುವುದು ಹೆಚ್ಚಿನ ಸಂತೋಷವೊದಗಿಸುತ್ತದೆ.


ನಾನು ಇಲ್ಲಿಯವರೆಗೆ ನೋಡಿದ ಸ್ಥಳಗಳಲ್ಲಿ ಯುರೋಪಿನ ಚಳಿಗಾಲವು ನನ್ನ ಹೃದಯದಲ್ಲಿ ವಿಶೇಷ ಸ್ಥಾನವನ್ನು ಹೊಂದಿದೆ.  ಇದು ನನ್ನ ಜೀವಮಾನದ ಅತ್ಯಂತ ಸ್ಮರಣೀಯ ಅನುಭವಗಳಲ್ಲಿ ಒಂದಾಗಿದೆ.

ಕೇಸರಿಯ ಯುರೋಪ್ ಪ್ರವಾಸಗಳು ಕೇವಲ ವಿಶಿಷ್ಟವಷ್ಟೇ ಅಲ್ಲ, ಕೇಸರಿಯವರ ನೈತಿಕತೆಯ ರೂಢಿಗಳಿಂದಾಗಿ ಸ್ಮರಣೀಯವೂ ಆಗಿರುತ್ತದೆ. ಎಂದಿನಂತೆ ಎಲ್ಲ ಒಳಗೊಂಡಿರುವ ಪ್ರವಾಸವಾಗಿರುತ್ತದೆ. ಯಾವುದೇ ಹೆಚ್ಚುವರಿ ವೆಚ್ಚಗಳಿಲ್ಲ. "ಏನೂ ಹಣ ಒಯ್ಯದ ಪ್ರವಾಸದ ಗ್ಯಾರಂಟಿ". ಸುಖಕರವಾದ ಎಸಿ ಲಕ್ಸುರಿ ಕೋಚ್‌ಗಳು, ಅತ್ಯಧಿಕ ಸ್ಥಳವೀಕ್ಷಣೆ ಒಳಗೊಂಡಿರುತ್ತದೆ. ರುಚಿಕರ ಭಾರತೀಯ ಅಡುಗೆಗಳು, ಉಪಾಹಾರ, ಲಂಚ್, ಡಿನ್ನರ್ ಎಲ್ಲ ಊಟಗಳು ಇತ್ಯಾದಿಗಳನ್ನು ಒಳಗೊಂಡಿರುತ್ತವೆ ಮತ್ತು ಇದೆಲ್ಲಕ್ಕಿಂತ ಮಹತ್ವದ್ದಾಗಿರುವುದು ವೃತ್ತಿಪರ ಹಾಗೂ ಕಾಳಜಿವಹಿಸುವ ಟೂರ್ ಮ್ಯಾನೇಜರ್ ಅವರು ಇಡೀ ಪ್ರವಾಸದ ಉದ್ದಕ್ಕೂ ನಿಮ್ಮ ಜೊತೆಯಲ್ಲಿ ಇರುತ್ತಾರೆ.

ಹಾಗಾಗಿ ಯುರೋಪ್ ಪ್ರವಾಸವನ್ನು ಚಳಿಗಾಲದಲ್ಲಿ ಮಾಡುವುದು ಅತ್ಯಗತ್ಯ! ಕೇಸರಿಯು ಯುರೋಪ್‌ನ ಚಳಿಗಾಲದ ವಿಭಿನ್ನ ವರ್ಣಗಳನ್ನು ಆನಂದಿಸುವುದಕ್ಕಾಗಿ ಯುರೋಪ್ ಪ್ರವಾಸವನ್ನು ನವೆಂಬರ್ ಮತ್ತು ಡಿಸೆಂಬರ್‌ಗಳಲ್ಲಿ ಆಯೋಜಿಸಿರುತ್ತದೆ. ನಿಮ್ಮ ನೆಚ್ಚಿನ ದಿನಾಂಕವನ್ನು ನಿರ್ಧರಿಸಿ ಮತ್ತು ಕಣ್ಮನ ತಣಿಸುವ ಮನಮೋಹಕ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ನಮ್ಮನ್ನು ಸೇರಿಕೊಳ್ಳಿ.

**–ಝೀಲಂ ಛಬುಲ್**

ಡೈರೆಕ್ಟರ್ – ಕೇಸರಿ ಟೂರ್ಸ್


| Code | Tour Name (Ex Bengaluru) | Days |
|---|---|---|
| E3 | Popular Europe | 18 |
| E6 | Best of Europe | 14 |
| E7 | Images of Europe | 12 |
| E8 | Glimpses of Europe | 10 |
| E9 | Highlights of Europe | 08 |

Bengaluru 4128 2222 • www.kesari.in • SMS KESARI <space> your message to 56677 • Toll free 1800 22 1100